ಸಪೋರ್ಟ್ ನಹೀ ಕರ್ ರಹೆ ಹೈ... ಹಾ ಆಪ್ಕೆ ಪಿತಾಜಿ ಗುಜರ್ ಗಯೆ ಇಸ್ಕಾ ದುಃಖ್ ತೊ ಸಬ್ ಕೊ ಹೈ .ಮಗರ್ ಸಬ್ ಬೋಲ್ ರಹೆ ಹೈ ಉನ್ಕೆ ಯಹಾ ಲೇಕರ್ ಆಯೇಂಗೆ ತೊ ಬಚ್ಚೆ ಡರ್ ಜಾಯೇಂಗೆ ಬೂಡೆ ಔರ್ ಪರೇಶಾನ್ ಹೋ ಜಾಯೇಂಗೆ ಅಪ್ಕೆ ಬಾರೆ ಮೆ ಸೋಚಕೆ...' ತಿವಾರಿಯ ಮಾತು ಇನ್ನೂ ಮುಂದುವರೆಯುತ್ತಲೇ ಇತ್ತು ತಲೆ ಕೆಟ್ಟಂತಾಗಿ ಮಿಹಿರ ಕರೆ ಕತ್ತರಿಸಿದ.

ಇನ್ನೊಂದು ಸ್ವಲ್ಪ ಹೊತ್ತಿಗೆಲ್ಲ ಅಪ್ಪನ ದೇಹ ರಿಲೀಸ್ ಆಗಿ ಬಂದು ಬಿಡತ್ತೆ. ಅಪ್ಪ ಇಲ್ಲ ಎಂದು ಅಳುವುದೋ, ಅಮ್ಮನನ್ನ ಸಮಾಧಾನ ಪಡಿಸುವುದೋ, ತಾತಾ ಎಂದು ಕಣ್ಣೀರಿಡುವ ಮಕ್ಕಳ ಸಂಬಾಳಿಸುವುದೋ ಅಥವಾ ಅಪ್ಪನ ದೇಹ ಇಡಲು ನೆಲಕ್ಕಾಗಿ ಹುಡುಕಾಡುವುದೊ... ಮಿಹಿರ ದಿಕ್ಕೆಟ್ಟಂತಾದ. ಮೊಬೈಲ್ ಮತ್ತೆ ಸದ್ದು ಮಾಡಿತು. ಅತ್ತಲಿಂದ ರಾಶಿ, 'ಮಿಹಿ, ಏನು ಯೋಚನೆ ಮಾಡಿದೆ? ಇಲ್ಲಿ ತರಕ್ಕಂತೂ ಬಿಡಲ್ಲ ಇವರು. ನಾನೇ ಮ್ಯಾನೇಜರನ ಹತ್ತಿರ ಮಾತಾಡಿ ಕನ್ವಿನ್ಸ್ ಮಾಡಲು ನೋಡಿದೆ. ಕನಿಷ್ಠ ಪಕ್ಷ ಅಪಾರ್ಟ್‌ಮೆಂಟ್ ಒಳಗಲ್ಲದಿದ್ದರೂ ಮೇನ್ ಗೇಟ್ ಹತ್ತಿರ ಇಡಕ್ಕಾದರೂ ಅವಕಾಶ ಕೊಡಿ, ದೂರದ ಊರಿಂದಲೂ ಜನ ಬರೋಪ್ರಿದಾರೆ ಅಂತ. ಉಹೂಂ ಕಮಿಟಿಯವರು ಒಪ್ತಾನೆ ಇಲ್ಲ... ನಿನ್ನ ಹತ್ತಿರದ ಸಂಬಂಧಿಗಳು ಯಾರಾದ್ರು ಒಂಚೂರು ಜಾಗ ಕೊಡಲು ಒಪ್ಪಿಕೊಂಡರೆ ಅಲ್ಲೇ ತೆಗೆದುಕೊಂಡು ಹೋಗಿ ಉಳಿದ ಕೆಲಸ ಮಾಡಬಹುದು...' ಮಿಹಿರ ಮಾತಾಡದೆ ಫೋನಿಟ್ಟ.

ಬೆಂಗಳೂರಿನ ಮಧ್ಯಭಾಗದಲ್ಲಿ ಕೋಟಿಗಟ್ಟಲೆ ಕೊಟ್ಟು ಮನೆ ಮಾಡಲು ಆಗುವುದಿಲ್ಲವೆಂಬ ಸತ್ಯದ ಜೊತೆಗೇ ಸ್ವಂತದ ಸೂರೊಂದಿರಬೇಕು, ಅದೂ ನೆಮ್ಮದಿಯಿಂದ ರಾತ್ರಿ ಹೊತ್ತು ನೀನಿಲ್ಲದಿದ್ದರೂ ಭಯವಿಲ್ಲದೆ ನಿದ್ದೆ ಮಾಡುವಂತಿರಬೇಕು ಎನ್ನುವ ರಾಶಿಯ ಮಾತುಗಳೇ ಬೆಳೆಯುತ್ತಿರುವ ನಗರದ ಅಂಚಿನಲ್ಲಿ ಎದ್ದ ಈ ಅಪಾರ್ಟ್‌ಮೆಂಟಿನಲ್ಲಿ ಫ್ಲ್ಯಾಟೊಂದನ್ನು ಖರೀದಿಸಲು ಕಾರಣವಾಗಿತ್ತು. ಸೈಟು ಕೊಳ್ಳು, ಮನೆ ಕಟ್ಟು ಎಂದೆಲ್ಲಾ ಓಡಾಡುವ ವ್ಯವಧಾನವಾಗಲೀ, ಇಂತಹ ವ್ಯವಹಾರದಲ್ಲಿ ಮೋಸ ಹೋಗದಿರುವಂತೆ ಎಚ್ಚರ ವಹಿಸುವ ಛಾತಿಯಾಗಲಿ ಇಲ್ಲದ್ದರಿಂದ ಸ್ನೇಹಿತನೊಬ್ಬ ತೆಗೆದುಕೊಂಡ ಧೈರ್ಯದ ಮೇಲೆ ಮಿಹಿರ ರಾಶಿ ಇಬ್ಬರೂ ಇಲ್ಲಿ ಫ್ಲ್ಯಾಟ್ ತೆಗೆದದ್ದು. ಯಾವುದೇ ಗಲಾಟೆ, ಮಾಲಿನ್ಯ ಇಲ್ಲದ ಈ ಪರಿಸರ ರಾಶಿಗಂತೂ ತುಂಬಾ ಇಷ್ಟವಾಗಿತ್ತು. ಸಿಟಿಯಿಂದ ದೂರ ಎನಿಸಿದರೂ ತಕ್ಕಡಿ ಈ ಕಡೆಗೇ ವಾಲಿತ್ತು. 'ಫ್ಲ್ಯಾಟ್ ಎಲ್ಲ ಬೇಡ ಮಿಹಿರ, ನೆಲಾನೂ ನಮ್ಮದಲ್ಲ, ಸೂರೂ ನಮ್ಮದಲ್ಲ, ಇದು ಒಂಥರಾ ತ್ರಿಶಂಕು ಸ್ಥಿತಿ. ನೀನು ಇಲ್ಲೇ ಎಲ್ಲಾದರೂ ಸೈಟು ನೋಡು, ಮನೆ ಕಟ್ಟೋಣ ನನ್ನ ಹಣಾನೂ ಇದೆಯಲ್ಲ' ಅಪ್ಪ ಬಹಳ ಹೇಳಿದ್ದರು. 'ಹಣದ ಪ್ರಶ್ನೆ ಅಲ್ಲಪ್ಪ, ಇಲ್ಲಿ ಬಹಳ ಮೋಸ ನಡೆಯುತ್ತೆ. ಒಂದು ಸೈಟನ್ನ ಮೂರು ನಾಲ್ಕು ಜನಕ್ಕೆ ಮಾರಿರ್ತಾರೆ, ಅದರ ಮೇಲೆ ಈ ಸರ್ಕಾರ ಯಾವಾಗ ಏನು ಡಿನೋಟಿಫೈ ಮಾಡತ್ತೋ... ಎಲ್ಲಾ ಸರಿ ಇದೆ ಅಂದುಕೊಂಡು ಮನೆ ಕಟ್ಟೋದು ಈ ಕಾಲದಲ್ಲಿ ಅಷ್ಟು ಸುಲಭ ಅಲ್ಲ. ನೀನಿನ್ನೂ ಹಳೇ ಕಾಲದಲ್ಲಿದೀಯ. ಪ್ಲಾನ್, ಕಂಟ್ರಾಕ್ಟರ್, ಎಂಜಿನಿಯರ್, ಮೆಟೀರಿಯಲ್‌ಗಳು ಇದೆಲ್ಲಾ ಹೊಂದಿಸಿ ಅವರನ್ನ ಕಾಯೋದು ಬೇರೆ. ನನಗಂತೂ ಪುರುಸೊತ್ತಿಲ್ಲ .ಇನ್ನು ನೀನು ಈ ವಯಸ್ಸಲ್ಲಿ ಮನೆ, ಸೈಟೂ ಅಂತ ಅಲೆದಾಡೋದು ಬೇಡ. ನೀನು ಆರಾಮವಾಗಿರು. ಈಗೆಲ್ಲಾ ಜನ ಅಪಾರ್ಟ್‌ಮೆಂಟ್‌ಗಳನ್ನೇ ಇಷ್ಟ ಪಡೋದು. ಕಳ್ಳ ಕಾಕರ ಭಯ ಇರಲ್ಲ...' ಮಿಹಿರನ ಮಾತು ಕೇಳಿ ಅಮ್ಮ ಕಣ್ಣಲ್ಲೇ ಅಪ್ಪನಿಗೆ ಸನ್ನೆ ಮಾಡಿ ಸುಮ್ಮನಿರುವಂತೆ ಸೂಚಿಸಿದ್ದು, ಮಿಹಿರನೂ ಗಮನಿಸಿದ್ದ. ಅಂತೂ ಇಂತೂ ಈ ಸಾವಿರದಿಪ್ಪತ್ತು